

## ಕುಂಭಕರ್ಣ, ಬಾಹುಬಲಿ ಥಾಲಿ!

ಜುನಾಗಢದಲ್ಲಿರುವ ಗಿರ್ನಾರ್ ಪರ್ವತಕ್ಕೆ ಭೇಟಿ ಕೊಟ್ಟಿದ್ದೆ. ದ್ವಾಪರದಲ್ಲಿ ರೈವತಕ ಪರ್ವತವೆಂದು (ಬಲರಾಮನ ಹೆಂಡತಿಯ ತವರು ಮನೆ) ಕರೆಯಲ್ಪಡುತ್ತಿದ್ದ ಈ ಪರ್ವತವು ಈಗ ಜೈನರ ಹಾಗೂ ಹಿಂದೂಗಳ ಪವಿತ್ರ ಕ್ಷೇತ್ರವಾಗಿದೆ. ಪರ್ವತದ ಕೆಳಗಡೆ ಮಧ್ಯಾಹ್ನದ ಭೋಜನಕ್ಕೆ ನಮ್ಮನ್ನು ಆಕರ್ಷಿಸಿದ್ದು 'ಪಟೇಲ್ ಸಹೋದರರ' ಹೋಟೆಲ್.

ನೆಲ ಮಹಡಿಯ ಹೋಟೆಲಿನಲ್ಲಿ 'ಬಾಹುಬಲಿ ಥಾಲಿ' ಆಕರ್ಷಿಸಿದರೆ, ಮೊದಲ ಮಹಡಿಯ ಹೋಟೆಲ್‌ನಲ್ಲಿ 'ಕುಂಭಕರ್ಣ ಥಾಲಿ'ಯ ಘಮಲು ಸೆಳೆಯಿತು. 35 ಬಗೆಯ ತಿನಿಸುಗಳು ಅದರಲ್ಲಿದ್ದವು. ಬರೋಬ್ಬರಿ 10 ಕೆ.ಜಿ. ತೂಕದ ಥಾಲಿಯ ಬೆಲೆ 2 ಸಾವಿರ ರೂಪಾಯಿ. 8–10 ಜನರ ತಂಡಕ್ಕೆ ಸಾಕಾಗುವ ಈ ಗುಜರಾತಿ ಥಾಲಿಯನ್ನು ಅಡುಗೆ ಮನೆಯಿಂದ ಬಾಹುಬಲಿ ಅಥವಾ ಕುಂಭಕರ್ಣ ವೇಷಧಾರಿ ತರುವುದು ಹಾಗೂ ಗಂಟೆ ಬಾರಿಸುತ್ತಾ ಅವನೊಂದಿಗೆ ಸಹಾಯಕರು ಬರುವುದು ವಿಶೇಷವಾಗಿತ್ತು.

–ಬಿ. ಸತ್ಯನಾರಾಯಣ ಅರಸ, ಅರೆಬೈಲು






## ಆದಿಯೋಗಿ ನೆಲೆಗೊಂಡಿದ್ದು ಹೀಗಾ?

ಸುತ್ತಲೂ ಮರಗಳ ರಾಶಿಯಿಂದ ಕೂಡಿದ ಶಿಖರಗಳು, ನಡುವೆ ನಿಂತ ಪರಶಿವನ ಮೂರ್ತಿಯನ್ನು ನೋಡಲು ಎರಡು ಕಣ್ಣುಗಳು ಸಾಲದು. ಸ್ವಚ್ಛಂದವಾದ ವಾತಾವರಣ. ಶಿವ ಮೌನವಾಗಿ ನಿಂತು 'ನಿಶ್ಶಬ್ದತೆಯನ್ನು ಆಲಿಸು, ಅಲ್ಲಿಯೂ ಅರ್ಥವಿದೆ' ಎಂದು ಹೇಳಿದಂತಿತ್ತು. ಆದಿಯೋಗಿ ಈಶನ ಬೃಹದಾಕಾರ ಮೂರ್ತಿಯನ್ನು ನೋಡುತ್ತಾ ಅಲ್ಲಿನ ಪರಿಸರದ ಪರಿಚಯ ಮಾಡಿಕೊಳ್ಳುತ್ತಿದ್ದಾಗ, ನನ್ನಲ್ಲಿ ಒಂದು ಕಥೆಯೊಂದು ಹೊಳೆಯಿತು. ಇದು ಕೇವಲ ಕಾಲ್ಪನಿಕವಾದರೂ ದೈವಿಕ ಭಾವನೆವುಳ್ಳವರ ಪಾಲಿಗೆ ಸತ್ಯವೂ...

ಶಿವನಿಗೆ ನಾಮಗಳು ಹಲವು, ಅವತಾರಗಳು ಹಲವು. ಆದಿಯೋಗಿ ಎಂಬುದು ಅದರಲ್ಲಿ ಒಂದು. ಒಮ್ಮೆ ಶಿವನಿಗೆ ತಪಸ್ಸನ್ನು ಮಾಡುವ ಇಚ್ಛೆಯಾಗಿ ಒಂದು ವಿಶಾಲವಾದ ಜಾಗದಲ್ಲಿ ಕುಳಿತು ಧ್ಯಾನಸ್ಥರಾದನಂತೆ. ಈ ತಪಸ್ಸಿನ ವೈಶಿಷ್ಟ್ಯ ಹೀಗಿತ್ತು... ಒಂದು ವರ್ಷ ದೀರ್ಘ ತಪಸ್ಸು ಮಾಡಿದರೆ ಗಾತ್ರ ದುಪ್ಪಟ್ಟಾಗುತ್ತದೆ ಎಂಬುದು ಕಟು ಕಾಲ್ಪನಿಕ. ಇಲ್ಲಿ ವಾಸ್ತವವೆಂದು ಅರ್ಥೈಸೋಣ. ಶಿವ ಧ್ಯಾನದಲ್ಲಿ ಮಗ್ನನಾಗಿ ಒಂದು ವರ್ಷ ಕಳೆದಿತ್ತು. ಅದ್ಯಾಕೋ ಶಿವನ ಗಾತ್ರ ಎರಡು ಪಟ್ಟು ಜಾಸ್ತಿ ಆಗಿತ್ತು. ಇನ್ನೊಂದು ವರ್ಷದ ನಂತರ ನಾಲ್ಕು ಪಟ್ಟು, ಮೂರನೇ ವರ್ಷಕ್ಕೆ ಎಂಟು ಪಟ್ಟು, ಹೀಗೆ ನಾಲ್ಕು ವರ್ಷಗಳು ಕಳೆದವು. ಶಿವನಿಗೆ ಇದ್ಯಾವುದರ ಅರಿವು ಇರಲಿಲ್ಲ. ಧ್ಯಾನದಲ್ಲಿ ಮಗ್ನ. ಕೊನೆಗೆ ಎಚ್ಚರವಾದಾಗ ಶಿವ ಮುಕ್ಕಾಲು ಭಾಗ ಭೂಮಿಯಲ್ಲಿ ಹೂತು ಹೋಗಿದ್ದ. ಶಿವನ ಭಾರದ ಒತ್ತಡಕ್ಕೆ ಸುತ್ತಲೂ ಶಿಖರಗಳು ಭುಗಿಲೆದ್ದು ನಿಂತಿದ್ದವು. ಹಚ್ಚ ಹಸಿರಿನಿಂದ ಕೂಡಿದ್ದ ಕಾಡು ತನ್ನ ಸುತ್ತ ಆವರಿಸಿತ್ತು. ಪ್ರಾಣಿ ಪಕ್ಷಿಗಳು ಅಲ್ಲಲ್ಲಿ ಬೀಡು ಬಿಟ್ಟಿದ್ದವು. ಜೀವರಾಶಿಗಳು ಶಿವನ ಆಶ್ರಯದಲ್ಲಿದ್ದವು.

'ತಾನು ಇಲ್ಲಿಂದ ಎದ್ದರೆ ಇಲ್ಲಿನ ಜೀವರಾಶಿಗಳೆಲ್ಲಾ ನಶಿಸಿ ಹೋಗುತ್ತವೆ. ಪ್ರಕೃತಿಯ ಸ್ವಾಭಾವಿಕತೆಗೆ ಧಕ್ಕೆಯಾಗುತ್ತದೆ' ಎಂಬ ಯೋಚನೆಯು ತಾಯಿಕರುಳಿನ ಶಿವನಿಗೆ ಕಾಡಲಾರಂಭಿಸಿತು. ಆಗ ತನ್ನ ಮೂಲ ಸ್ವರೂಪವನ್ನು ಅಲ್ಲೇ ಬಿಟ್ಟು ಹೋಗಲು ನಿರ್ಧರಿಸಿದ. ಈ ರೀತಿಯಾಗಿ ಬೃಹದಾಕಾರವಾದ ಶಿವನ ಧ್ಯಾನಮಗ್ನನಾದ ಮೂರ್ತಿ ಅಲ್ಲಿ ನೆಲೆಸಿತು.

–ಶಿವಪ್ರಸಾದ್ ಕೆ.ಎಸ್.